Ref.No. 54/2023

WW-1,

ದಿನಾಂಕಃ 16-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದಃ

ನಾನು ಸುಮಾರು 10-12 ವರ್ಷಗಳಿಂ ಟ್ರೇಡ್ ಯೂನಿಯನ್ ಲೀಡರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು All India United Trade Union Centre ನಲ್ಲಿ District Secretary ಆಗಿ ಕೆಲಸ ಮಾಡುತ್ತಿದ್ದೇನೆ. AIUTUC ಸೆಂಟ್ರಲ್ ಯೂನಿಯನ್ ಎಂದರೆ ಸರಿ . ಮೈಸೂರು ಜಿಲ್ಲೆಗೆ ಸಂಬಂದಿಸಿದ ಯೂನಿಯನ್ ನಲ್ಲಿ ಕೆಲಸ ನಿರ್ವಹಿಸುತ್ತಿಲ್ಲ , AIUTUC ನ ಜಿಲ್ಲಾ ಸಮಿತಿಯಲ್ಲಿ ಕೆಲಸ ಮಾಡುತ್ತಿದ್ದೇನೆ. AT & S India Pvt. Ltd. Employees Association ಯೂನಿಟ್ ಲೆವಲ್ ಸಂಘವಾಗಿರುತ್ತದೆ ಎಂದರೆ ಸರಿ . ಸದರಿ ಸಂಘವು ಯಾವಾಗ ರಿಜಿಸ್ಟರ್ ಆಗಿರುತ್ತದೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ ಸುಮಾರು 2000 ಇಸವಿಯಲ್ಲಿ ಆಗಿರಬಹುದು. ನಾನು ಸದರಿ ಸಂಘಕ್ಕೆ 3 ವರ್ಷದ ಹಿಂದೆ ಪ್ರೆಸಿಡೆಂಟ್ ಆಗಿರುತ್ತೇನೆ . ನನ್ನ ಮೊದಲು ಉಮೇಶ್ ಮತ್ತು ಮಧುಸೂದನ್ ರವರು ಸದರಿ ಸಂಘದ ಅಧ್ಯಕ್ಷರಾಗಿದ್ದರು. ಉಮೇಶ್ ಮತ್ತು ಮಧುಸೂದನ್ 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಕಾರ್ಮಿಕರಾಗಿದ್ದರು ಎಂದರೆ ಸರಿ . ನಾನು 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಯಾವುದೇ ಕೆಲಸ ಮಾಡಿರುವುದಿಲ್ಲ ಎಂದರೆ ಸರಿ . ನಾನು ಅಧ್ಯಕ್ಷನಾದ ನಂತರ 2 ನೇ ಪಾರ್ಟಿ ಸಂಸ್ಥೆ ಯ ಬಗ್ಗೆ ಮಾಹಿತಿ ಗೊತ್ತಾಗಿರುತ್ತದೆ. ನಾನು ಅಧ್ಯಕ್ಷನಾಗುವ ಮೊದಲು ಸಂಘ ಮತ್ತು 2 ನೇ ಪಾರ್ಟಿ ಸಂಸ್ಥೆ ಯ ಮಧ್ಯೆ ಆದಂತಹ ವಿವಾದಗಳು ಮತ್ತು ಅದು ಬಗೆಹರಿದ ಬಗ್ಗೆ ನನಗೆ ಗೊತ್ತಿರುತ್ತದೆ. ಸಂಘ ಮತ್ತು 2 ನೇ ಪಾರ್ಟಿ ಸಂಸ್ಥೆ ಯ ಮಧ್ಯೆ ಆದಂತಹ ಧೀರ್ಘಕಾಲಿನ ವೇತನ ಒಪ್ಪಂದದ ಬಗ್ಗೆ ನನಗೆ ಗೊತ್ತಿರುತ್ತದೆ . ಸಾಕ್ಷಿದಾರರು ಮುಂದುವರೆದು ಒಂದರ ಬಗ್ಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ . ಸಂಘ ಮತ್ತು 2 ನೇ ಪಾರ್ಟಿ ಸಂಸ್ಥೆ ಯ ಮಧ್ಯೆ ಎಷ್ಟು ಧೀರ್ಘಕಾಲಿನ ವೇತನ ಒಪ್ಪಂದಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ . ಈ ಪ್ರಕರಣ ದಲ್ಲಿ ಸುಮಾರು 109 ಕಾರ್ಮಿಕರು ಒಳಪಟ್ಟಿರುತ್ತಾರೆ. ಎಲ್ಲಾ 109 ಕಾರ್ಮಿಕ ರು ಬೋನಸ್ ಗೆ ಅರ್ಹರಾಗಿರುತ್ತಾರೆ ಎಂದು ನಮ್ಮ ಅರ್ಜಿಯಲ್ಲಿ ಕೇಳಿಕೊಂಡಿರುತ್ತೇವೆ. 109 ಕಾರ್ಮಿಕರ ಹೆಸರುಗಳು ರೆಫರೆನ್ಸ್ ನೊಂದಿಗೆ ಲಗತ್ತಿಸಿ ಬಂದಿರುತ್ತದೆ.

ಆರ್ಡರ್ ಆಫ್ ರೆಫರೆನ್ಸ್ ನಲ್ಲಿ ಕುಮಾರ್ ಆರ್ ಮತ್ತು ಇತರ 94 ಕಾರ್ಮಿಕರು ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ಆದುದರಿಂದ ಈ ಪ್ರಕರಣವು 95 ಕಾರ್ಮಿಕರಿಗೆ ಸಂಬಂಧಪಟ್ಟದ್ದಾಗಿರುತ್ತದೆ 109 ಕಾರ್ಮಿಕರಿಗೆ ಅಲ್ಲ. ಸದರಿ 95 ಕಾರ್ಮಿಕ ರಲ್ಲಿ ಹಲವಾರು ಜನ ಆಡಳಿತ ವರ್ಗ ದವರೊಂದಿಗೆ ಮಾತನಾಡಿ full and final settlement ಪಡೆದುಕೊಂಡು ಕೆಲಸ ಬಿಟ್ಟಿರುತ್ತಾರೆ ಎಂದರೆ ಸರಿ . ಸುಮಾರು 80 ಜನ ಆ ರೀತಿ full and final settlement

ಪಡೆದುಕೊಂಡಿರಬಹುದು. ಆ ರೀತಿ ಇದ್ದರೂ ಕೂಡ 95 ಕಾರ್ಮಿಕರಿಗೆ ಸಂಬಂಧಿಸಿದಂತೆ ಬೋನಸ್ ಅನ್ನು ಈ ಅರ್ಜಿಯಲ್ಲಿ ಕೇಳುತ್ತಿದ್ದೇವೆ. full and final settlement ಪಡೆದುಕೊಂಡಂತಹ 80 ಜನ ಕಾರ್ಮಿಕ ರ ಪಟ್ಟಿಯನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ ಸಾಕ್ಷಿದಾರರು ಮುಂದುವರೆದು ಅದು ಈ ಪ್ರಕರಣಕ್ಕೆ ಸಬಂಧಿಸಿರುವುದಿಲ್ಲ ಎಂದು ನುಡಿಯುತ್ತಾರೆ . ಸದರಿ 80 ಜನ ಕಾರ್ಮಿಕ ರು ಆಡಳಿತ ವರ್ಗ ದವರೊಂದಿಗೆ ಮಾಡಿಕೊಂಡಂತಹ ಒಪ್ಪಂದದ ಬಗ್ಗೆ ನನಗೆ ಗೊತ್ತಿರುವುದಿಲ್ಲ. Order of reference ನೊಂದಿಗೆ ಬಂದಂತಹ ಅನುಬಂಧ-1 ನ್ನು ನಾವು ಸಂಧಾನ ಅಧಿಕಾರಗಳ ಮುಂದೆ ಹಾಕಿದಂತಹ ದಾಖಲಾತಿಯಾಗಿರುತ್ತದೆ ಎಂದರೆ ಸರಿ . ಸದರಿ ದಾಖಲಾತಿಯನ್ನು ನಾವು ಕಛೇರಿಯಲ್ಲಿ ದಾಖಲಾತಿಯಾಗಿರುತ್ತದೆ ಎಂದರೆ ಸರಿ . ಸದರಿ ದಾಖಲಾತಿಯನ್ನು ಕಾರ್ಮಿಕ ರಿಗೆ ಬಂದಂತಹ ಬೋನಸ್ ಮತ್ತು 2 ನೇ ಪಾರ್ಟಿ ಸಂಸ್ಥೆ ಯವರು ನೀಡದೇ ಇಂದ್ದಂತಹ ಬೋನಸ್ ನ ಲೆಕ್ಕ ಹಾಕಿ ತಯಾರಿಸಲಾಗಿರುತ್ತದೆ. ಸದರಿ ದಾಖಲಾತಿಯನ್ನು ಮೌಖಿಕವಾ ಕಾರ್ಮಿಕ ರೊಂದಿಗೆ ಮಾತನಾಡಿ ಅವರಿಂದ ಮಾಹಿತಿಯನ್ನು ಪಡೆದು general body meeting ನಲ್ಲಿ ಚರ್ಚಿಸಿ ಹಾಕಲಾಗಿರುತ್ತದೆ ಎಂದರೆ ಸರಿ . ಅನುಬಂಧ -1 ಕ್ಕೂ general body meeting ಗೂ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ . ಕಾರ್ಮಿಕರ ಹೇಳಿಕೆ ಮತ್ತು bank statement ಅನ್ನು ಪರಿಶೀಲಿಸಿ ಅನುಬಂಧ-1 ನ್ನು ತಯಾರಿಸಲಾಗಿರುತ್ತದೆ. ಕಾರ್ಮಿಕರ ಹೇಳಿಕೆ ಮತ್ತು bank statement ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ . ಯಾವುದೇ bank statement ಆಧಾರದ ಮೇರೆಗೆ ಅನುಬಂಧ-1 ನ್ನು ತಯಾರಿಸದೇ ಇದ್ದುದರಿಂದ ದಾಖಲಾತಿಗಳನ್ನು ಹಾಜರುಪಡಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ . ಅನುಬಂಧ-1 ಕಾನೂನು ಬದ್ದವಾಗಿ ಮಾಡಿರುವುದಿಲ್ಲ ಕೇವಲ ಕಾರ್ಮಿಕ ರ ಮೌಖಿಕ ಹೇಳಿಕೆಯ ಮೇಲೆ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ .

ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.